

ಏಳು ಬಗೆಯ ಶಂಕುಹುಳಗಳಲ್ಲಿ ಪ್ರಶ್ನಾತೀತ ಸುಂದರಿ ಎಂದರೆ, ಅದು 'ಕ್ಯೂಬಾ ಪೇಂಟೆಡ್ ಶಂಕುಹುಳ'! ತನ್ನ ಆಕರ್ಷಕ ಬಣ್ಣ ಸಂಯೋಜನೆಯಿಂದ ಗಮನಸೆಳೆಯುವ ಇದನ್ನು 'ಶಂಕುಹುಳಗಳ ವಿಶ್ವಸುಂದರಿ' ಎನ್ನಬಹುದು...



ವೈರಿ– ಭಕ್ಷಕ ಕೀಟ ಅಂದರೆ ಮಿಣುಕುಹುಳ! ಮರಗಳಲ್ಲಿ ಎಲ್ಲಿಯೇ ಅಡಗಿದ್ದರೂ, ಛದ್ಮವೇಷ ನಾಟಕವಾಡಿದರೂ ಪತ್ತೆ ಹಚ್ಚಿ ತಿಂದುಬಿಡುತ್ತವೆ! ಶಂಕುಹುಳದ ಒಂದೇ ದೇಹದಲ್ಲಿ ಗಂಡು, ಹೆಣ್ಣು ಜನನಾಂಗಗಳೆರಡೂ ಇರುತ್ತವೆ. ಆದರೂ ಗರ್ಭ ಧರಿಸಲು ಅಂತಹುದೇ ಮತ್ತೊಂದು ಶಂಕುಹುಳದ ಅಗತ್ಯವಿರುತ್ತದೆ. ಎರಡು ಲಿಂಗಗಳೂ ತನ್ನಲ್ಲಿಯೇ ಇವೆಯೆಂದು ತಾನೇ ಗರ್ಭ ಧರಿಸಿಕೊಳ್ಳಲು ಸಾಧ್ಯವಿಲ್ಲ. ಎರಡರಲ್ಲೂ 'ಲವ್ ಡಾರ್ಟ್ಸ್'ಗಳಿರುತ್ತವೆ. ಎರಡೂ ಗರ್ಭ ತಾಳಿ ಮೊಟ್ಟೆ (ಕಟ್ಟು) ಇಡುತ್ತವೆ. ಸುಮಾರು ನೂರು ಮೊಟ್ಟೆಗಳವರೆಗೆ ಇರುತ್ತವೆ! ಇದು ಬಸವನಹುಳದ ಅನನ್ಯ ಗುಣಲಕ್ಷಣ! ಕ್ಯೂಬಾ ಪೇಂಟೆಡ್ ಶಂಕುಹುಳಗಳು ವರ್ಷದ ಮಳೆಗಾಲದಲ್ಲಿ/ಆರ್ದ್ರ ಋತುವಿನಲ್ಲಿ (ಸೆಪ್ಟೆಂಬರ್– ಅಕ್ಟೋಬರ್) ತಳಿ ಕೂಡುತ್ತವೆ. ಶುಷ್ಕ ತಿಂಗಳುಗಳಲ್ಲಿ (ಡಿಸೆಂಬರ್ –ಮೇ) ಸುಪ್ತವಾಗಿರುತ್ತವೆ. ಅವುಗಳ ಜೀವಾವಧಿ 15 ತಿಂಗಳು ಮಾತ್ರ!

ಈ ಶಂಕುಹುಳ ಕ್ಯೂಬಾ ನೆಲದ ಸ್ಥಳೀಯ ಬಸವನಹುಳ. ಕ್ಯೂಬಾ ದ್ವೀಪಕ್ಕೆ ಮಾತ್ರ ಸೀಮಿತ. ಆ ದ್ವೀಪದ ನೈಸರ್ಗಿಕ ಪರಂಪರೆಯ ಅನನ್ಯಜೀವಿ! ಬೆಚ್ಚಗಿನ ಹವಾಮಾನ ಇವುಗಳಿಗೆ ಬಲುಪ್ರಿಯ. ಇವು ಮರಗಳ ಮೇಲೆ ವಾಸಿಸುತ್ತವೆ! ಕ್ಯೂಬಾ ದ್ವೀಪದ ಪೂರ್ವಭಾಗದಲ್ಲಿ ಉಷ್ಣವಲಯದ ಕಡಲತೀರದ ಅರಣ್ಯಗಳೇ ಇವುಗಳ ನೆಲೆ. ಅದರಲ್ಲೂ ವಿಶೇಷವಾಗಿ ಪೂರ್ವಭಾಗದ ಪರ್ವತ ಶ್ರೇಣಿಗಳಿಂದ ಈಶಾನ್ಯ ಕಡಲ ತೀರದ ಅರಣ್ಯಗಳವರೆಗೆ ಹಬ್ಬಿಕೊಂಡಿರುವ 'ಅಲೆಕ್ಸಾಂಡರ್ ವೊನ್ ಹಂಬೊಲ್ಟ್ ರಾಷ್ಟ್ರೀಯ ಉದ್ಯಾನ'ದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತವೆ. ಶುಷ್ಕ ಹವಾಮಾನ ಪ್ರದೇಶದಿಂದ ಹಿಡಿದು ಉದ್ದಕ್ಕೂ ಮಳೆಗಾಡು ಪ್ರದೇಶಗಳವರೆಗೆ ವಿಶಾಲ ವ್ಯಾಪ್ತಿ ಪ್ರದೇಶ ಅವುಗಳ ವಾಸನೆಲೆ. ಕೆರಿಬಿಯನ್ ಸಮುದ್ರದಲ್ಲಿರುವ ಕ್ಯೂಬಾ ಒಂದು ದ್ವೀಪ ರಾಷ್ಟ್ರ.

## ಶಂಕುಹುಳಗಳ ಆಹಾರ

ಮರದ ರೆಂಬೆಗಳ ಮೇಲಿನ ಶಿಲೀಂಧ್ರ, ಪಾಚಿ, ಕಲ್ಲುಹೂವು (ಲಿಚೆನ್ಸ್), ಬಯೋಫಿಲ್ಮ್ (ಸೂಕ್ಷ್ಮಜೀವಿಪದರ) ತೊಗಟೆಯ ಕೊಳೆತ ಸಾವಯವ ಪದಾರ್ಥ ಇವು ಮರದ ಮೇಲೆಯೇ ಜೀವಿಸುವ ಶಂಕುಹುಳಗಳು. ಆಹಾರಕ್ಕೆ ಮರ ಇಳಿದು ನೆಲದ ಮೇಲೆ ಬರಬಹುದಾದರೂ ಸುರಕ್ಷತೆ ದೃಷ್ಟಿಯಿಂದ ಅವು ನೆಲಕ್ಕೆ ಬರಲು ಹಿಂದುಮುಂದು ನೋಡುತ್ತವೆ.

ಈ ಕಲಾತ್ಮಕ ಪೇಂಟೆಡ್ ಶಂಕುಚಿಪ್ಪುಗಳಿಗೆ ಅಪಾರ ಬೇಡಿಕೆ. ದುಬಾರಿ ಬೆಲೆ. ಕಾರಣ, ಇವುಗಳ ಆಕರ್ಷಕ ಬಣ್ಣಗಳು. ಈ ಶಂಕುಚಿಪ್ಪಗಳಿಂದ ಆಭರಣಗಳನ್ನು ತಯಾರಿಸುತ್ತಾರೆ. ಇತರೆ ಆಭರಣಗಳ ಕಲ್ಲು, ರತ್ನ, ಹರಳು, ಮುತ್ತು, ಮಣಿಗಳ ಮಧ್ಯೆ ಸೇರಿಸಿ ಅಂದ ಹೆಚ್ಚಿಸುತ್ತಾರೆ. ಕಿವಿಯೋಲೆ, ಸರ, ಪದಕ, ಕೈಬಳೆಗಳಾಗಿ ಬಳಸುತ್ತಾರೆ. ಇತರ ಕಲಾಕೃತಿಗಳಲ್ಲೂ, ಆಲಂಕಾರಿಕ ವಸ್ತುಗಳಲ್ಲೂ ಬಳಸುತ್ತಾರೆ. ವಿದೇಶಿಯರಿಗೆ ಇವುಗಳ ಹುಚ್ಚು ಹೆಚ್ಚು.

## ವಿನಾಶದ ಅಂಚಿನಲ್ಲಿ...

ಕ್ಯೂಬಾ ಪೇಂಟೆಡ್ ಶಂಕುಹುಳಗಳು ಪ್ರಸ್ತುತ ಅಪಾಯಕರ ಸ್ಥಿತಿಯಲ್ಲಿವೆ. ಇವುಗಳ ಸಂಖ್ಯೆ ಅಪಾರ ಪ್ರಮಾಣದಲ್ಲಿ ಇಳಿಮುಖವಾಗುತ್ತಿದೆ. ಪೂರ್ವ ಕ್ಯೂಬಾ ಸ್ಥಳೀಯ ಕಾಡು ವಾಸನೆಲೆಗಳಿಂದ ಕಣ್ಮರೆಯಾಗುತ್ತಿವೆ. ಇವುಗಳ ಸೌಂದರ್ಯವೇ ಇವುಗಳಿಗೆ ಮಾರಕ! ಪ್ರಸ್ತುತ ಇವುಗಳ ಸಂಖ್ಯೆ 30000ಕ್ಕಿಂತಲೂ ಕಡಿಮೆ ಇದೆ ಎಂದು ಒಂದು ಅಂದಾಜು. ಅಕ್ರಮ ಶಂಕುಚಿಪ್ಪೆ ಸಂಗ್ರಹಕಾರರು ಬೇಟೆಗಾರರು ಇವುಗಳನ್ನು ಸೆರೆಹಿಡಿದು ಸಾಯಿಸಿ ಶಂಕುಚಿಪ್ಪೆ ತೆಗೆದು ಮಾರಾಟ ಮಾಡುತ್ತಿರುವುದೂ ಒಂದು ಕಾರಣ.

ಕ್ಯೂಬಾ ಪೇಂಟೆಡ್ ಶಂಕುಹುಳ 1943ರಿಂದ ಕ್ಯೂಬಾ ಸರಕಾರದ ಕಾನೂನುನಡಿಯಲ್ಲಿ ಸಂರಕ್ಷಿತ ಜೀವಿ. ವೈಜ್ಞಾನಿಕ ಕಾರಣಗಳಿಗೆ ಬಿಟ್ಟು ಬೇರೆ ಯಾವುದೇ ಕಾರಣಕ್ಕೆ ಈ ಶಂಕುಹುಳಗಳ ಸೆರೆ, ಸಂಗ್ರಹ, ಮಾರಾಟ, ರಫ್ತನ್ನು ನಿಷೇಧಿಸಲಾಗಿದೆ. ಆದರೆ ಕಾನೂನು ಕಠಿಣವಾಗಿ ಜಾರಿಗೊಳಿಸದ ಕಾರಣ ಅಕ್ರಮ ಮುಂದುವರೆದಿದೆ. ಕ್ಯೂಬಾದ ಜೀವಶಾಸ್ತ್ರಜ್ಞರು ಹಾಗೂ ಬ್ರಿಟನ್‌ನ ನಾಟಿಂಗ್‌ಹ್ಯಾಮ್ ವಿಶ್ವವಿದ್ಯಾನಿಲಯದ ತಜ್ಞರು ಪೊಲಿಮಿಟಾದ ಆರು ಪ್ರಭೇದದ ಶಂಕುಹುಳಗಳನ್ನು ಕಾಪಾಡುವ ಉದ್ದೇಶದಿಂದ ಒಂದು ತಂಡ ರಚಿಸಿದ್ದಾರೆ. ■